# <u>ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ</u>

# <u>ಬಳ್ಳಾರಿ</u>

## <u>ವಿಶೇಷ ಮೊಕದ್ದಮೆ ಸಂಖ್ಯೆಃ991/2021</u>

**<u>ಪಿ.ಡಬ್ಲ್ಯೂಃ 7 (ಸಿಡಬ್ಲ್ಯೂಃ 13 )</u>**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಹೊನ್ನೂರುಸ್ವಾಮಿ** |
| **ತಂದೆಯ ಹೆಸರು** | : | **ಲೇಟ್ ಅಲಿಪುರದ ಮಾರೆಣ್ಣ** |
| **ವಯಸ್ಸು** | : | **33 ವರ್ಷ** |
| **ಕೆಲಸ** | : | **ಅಸಿಸ್ಟೆಂಟ್ ಲೈನ್‌ಮನ್** |
| **ವಾಸ ಸ್ಥಳ** | : | **ಕುಡುತಿನಿ** |

**<u>ಸಾಕ್ಷಿಯನ್ನು ದಿನಾಂಕ 18.11.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>**

ನಾನು ಕುಡುತನಿ ಶಾಖೆ ಸಿದ್ದಮ್ಮನಹಳ್ಳಿಯಲ್ಲಿ 2019 ರಿಂದ ಲೈನ್ ಮನ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಚಂದ್ರಪ್ಪ ಲೈನ್ ಮನ್ ಆಗಿ ಕೆಲಸ ಮಾಡುತ್ತಾರೆ. ಚಾಸಾ.14 ರವರು ಕುಡುತಿನಿ ಶಾಖೆಯಲ್ಲಿ ಜೂನಿಯರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಾರೆ.

**2.** ದಿಃ28.8.2019 ರಂದು ಸಬ್ ರಿಜಿಸ್ಟ್ರಾರ್ ಕಚೇರಿ ಬಳ್ಳಾರಿಯಲ್ಲಿ ಮೀಟಿಂಗ್ ಇದ್ದು ನಾನು ಮೀಟಿಂಗ್ ಗೆ ಬಂದಿದ್ದೆನು. ಮಃ 3.00 ಗಂಟೆಯಿಂದ ಸಂಜೆ 5.00 ಗಂಟೆ ವರೆಗೆ ಮೀಟಿಂಗ್ ಇತ್ತು. ಮೀಟಿಂಗ್ ಮುಗಿಸಿ ನಾನು ಹೊರಗಡೆ ಬಂದು ಚಹಾ ಕುಡಿಯುತ್ತಿದ್ದ ಸಮಯದಲ್ಲಿ ಬೂಡಾ ಕಾಂಪ್ಲೆಕ್ಸ ನಲ್ಲಿ ಜನರು ಸೇರಿದ್ದು ಗಲಾಟೆ ಕಂಡು ಬಂತು. ವಿಚಾರಣೆ ಮಾಡಲಾಗಿ ಆರೋಪಿ ಚಂದ್ರಪ್ಪ ರವರು ಟ್ರಾಪ್ ಆಗಿದ್ದಾರೆ ಎಂದು ತಿಳಿಯಿತು.

**Spl.C.No. 991/2021**
**P.W.7 (C.W.13)**
**Date : 18.11.2025**

**3.** ನಾನು , ಚಂದ್ರಪ್ಪ , ಎಸಿಬಿ ಅಧಿಕಾರಿಗಳು ಮತ್ತು ಇತರ ಸರ್ಕಾರಿ ಅಧಿಕಾರಿಗಳು ಸೇರಿಕೊಂಡು ಅಸಿಸ್ಟೆಂಟ್ ಇಂಜಿನಿಯರ್ ಆಫೀಸ್ ಒಳಗೆ ಹೋದೆವು. ಅಲ್ಲಿ ಏನು ಪ್ರಕ್ರಿಯೆ ನಡೆಯಿತು ಎಂದು ನಾನು ನೋಡಿಲ್ಲ. ಈಗ ತೋರಿಸಿದ ದಾಖಲೆಗಳಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ.4 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.4 ಈ** ಎಂದು ಗುರುತಿಸಲಾಯಿತು. ಈಗ ತೋರಿಸಿದ ಫೋಟೋ ಗಳಲ್ಲಿ ನಾನುಕಂಡು ಬರುತ್ತೇನೆ. ಸದರಿ ಫೋಟೋ ಗಳನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದೆ. ನಾನು ಎಸಿಬಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿಲ್ಲ.

***(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಮತ್ತು ಪಾಟಿ ಸವಾಲಿಗೆ ಒಳಪಡಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)***

**ಪಾಟಿ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

**4.** ದಿಃ28.8.2019 ರಂದು ನಾನು ಮೀಟಿಂಗಿ ಮುಗಿಸಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿ ಜೆಸ್ಕಾಂ ನ ನಿಂದ ಹೊರಗೆ ಬಂದಾಗ ಆರೋಪಿ ಚಂದ್ರಪ್ಪ ನನಗೆ ಫೋನ್ ಮಾಡಿ ಬೂಡಾ ಕಚೇರಿಯ ಆವರಣದಲ್ಲಿರುವ ಪ್ರಗತಿ ಕೃಷ್ಣ ಗ್ರಾಮೀಣ ಕಚೇರಿ ಹತ್ತಿರ ತಾನು ಇದ್ದು ತಾನು ಮೋಟಾರು ಸೈಕಲ್ ತಂದಿರದ ಕಾರಣ ತನ್ನನ್ನು ಬಸ್ ನಿಲ್ದಾಣದ ಹತ್ತಿರ ಬಿಟ್ಟು ಬಾ ಎಂದು ತಿಳಿಸಿರುತ್ತಾನೆ ಎನ್ನುವುದು ಸರಿ . ನಾನು ಅದರಂತೆ ಚಂದ್ರಪ್ಪನ ಹತ್ತಿರ ಹೋದಾಗ ಅಲ್ಲಿ ಒಬ್ಬ ವ್ಯಕ್ತಿ ಇದ್ದು ಚಂದ್ರಪ್ಪನು ನನಗೆ ಈತ ಹಣ ಕೊಡುತ್ತಾನೆ , ಅದನ್ನು ನಿನ್ನ ಹತ್ತಿರ ಇಟ್ಟುಕೋ ಎಂದು ಹೇಳಿರುತ್ತಾನೆ ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಎಸಿಬಿ ಅಧಿಕಾರಿಗಳು ಚಂದ್ರಪ್ಪನ್ನು ಟ್ರಾಪ್ ಮಾಡಿ ಆತನ ಕೈಯನ್ನು ದ್ರಾವಣದಲ್ಲಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಎನ್ನುವುದು ಸರಿಯಲ್ಲ. ಸದರಿ ಸ್ಥಳದಲ್ಲಿ ಗಲಾಟೆ ಆದ ಕಾರಣ ಆರೋಪಿಯನ್ನು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿಗೆ ಕರೆದುಕೊಂಡು ಹೋದರು ಎನ್ನುವುದು ಸರಿಯಲ್ಲ. ಸದರಿ ಕಚೇರಿಯಲ್ಲಿ ಹಣ ಜಪ್ತುಪಂಚನಾಮೆ ಮಾಡಿದ್ದು

**Spl.C.No. 991/2021**
**P.W.7 (C.W.13)**
**Date : 18.11.2025**

ನಾನು ಅಲ್ಲಿ ಬರೆದ ಹಣ ಜಪ್ತುಪಂಚನಾಮೆಗೆ ಸಹಿ ಮಾಡಿದ್ದೇನೆ ಎನ್ನುವುದು ಸರಿ. ಆ ಸಮಯದಲ್ಲಿ ಫೋಟೋ ಗಳನ್ನು ತೆಗೆದರು ಎನ್ನುವುದು ನನಗೆ ಗೊತ್ತಿಲ್ಲ. ಎಸಿಬಿ ಅಧಿಕಾರಿಗಳು ನನ್ನ ಮತ್ತು ಪ್ರಾಸಾ.6 ಅಶೋಕ ರೆಡ್ಡಿ ರವರ ಸಮಕ್ಷಮದಲ್ಲಿ ಸಿಡಿಯಲ್ಲಿ ಇದ್ದ ಒಂದು ಧ್ವನಿಯನ್ನು ಕೇಳಿಸಲಾಗಿ ನಾವಿಬ್ಬರು ಸದರಿ ಧ್ವನಿಯನ್ನು ಕೇಳಿಸಿಕೊಂಡು ಅದು ಆರೋಪಿ ಚಂದ್ರಪ್ಪನ ಧ್ವನಿ ಎಂದು ಗುರುತಿಸಿರುತ್ತೇವೆ ಎನ್ನುವುದು ಸರಿಯಲ್ಲ. ಎಲ್ಲಾ ಪ್ರಕ್ರಿಯೆಯ ಬಗ್ಗೆ ನಾನು ಎಸಿಬಿ ಅಧಿಕಾರಿಗಳ ಮುಂದೆ **ನಿಪಿ.35** ರಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಯುಬಿ ಆರ್ ವಕೀಲರು ಆರೋಪಿಯ ಪರಃ</u>**

**5.** ಆರೋಪಿ ನನಗೆ ಫೋನ್ ಮಾಡಿಲ್ಲ ಎನ್ನುವುದು ಸರಿ . ನಾನು ಎಸಿಬಿ ಕಚೇರಿಯಲ್ಲಿ ಪಂಚನಾಮೆಗೆ ಸಹಿ ಮಾಡಿದ್ದೇನೆ.

**<u>ಮರು-ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

**<u>ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**